## ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ :: ಕೇಂದ್ರ ಕಛೇರಿ :: ಬೆಂಗಳೂರು

ಸಂಖ್ಯೆ:ಬೆಂಮಸಾಸಂ/ಕೇಕ/ನೇಮಕ/ಆರ್1/ 3611 /2012-13 ದಿನಾಂಕ: 10/01/2013

**ಜಾಹೀರಾತು ಸಂಖ್ಯೆ: 1/2013**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ನಿರ್ವಾಹಕ- ದರ್ಜೆ-3ರ 12 ಹುದ್ದೆಗಳಿಗೆ ಕ್ರೀಡಾಖೋಟಾದಡಿ ಪ್ರತಿಭಾವಂತ ಪುರುಷ ಕಬಡ್ಡಿ ಕ್ರೀಡಾ ಪಟುಗಳನ್ನು ಸಂಸ್ಥೆಯು ಅಳವಡಿಸಿಕೊಂಡಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿಗಳು 1982 ಮತ್ತು ಅವುಗಳ ತಿದ್ದುಪಡಿಗಳನ್ವಯ ಹಾಗೂ ಸುತ್ತೋಲೆ ಸಂಖ್ಯೆ 108 ದಿನಾಂಕ 10-01-2013ರ ಷರತ್ತು ಮತ್ತು ನಿಬಂಧನೆಗಳ ಅನುಸಾರ ಒಂದು ಬಾರಿಗೆ ನೇರ ನೇಮಕಾತಿ ಮೂಲಕ ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**I.** ಒಟ್ಟು ಹುದ್ದೆಗಳು : 12

**II.** ವಿದ್ಯಾರ್ಹತೆಗಳ ವಿವರ:

ಅ) ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

ಆ) ಚಾಲ್ತಿಯಲ್ಲಿರುವ ನಿರ್ವಾಹಕರ ಪರವಾನಗಿ ಮತ್ತು ಬ್ಯಾಡ್ಜ್ ಹೊಂದಿರಬೇಕು.

ಇ) ಕಬಡ್ಡಿ ಕ್ರೀಡಾಖೋಟಾದಡಿ ವಿಶೇಷ ನೇಮಕಾತಿ ಮಿತಿಗಳಾದ ಈ ಜಾಹೀರಾತಿನ ಕಲಂ VIIರ (1), (2) ಮತ್ತು (3) ರ ಅರ್ಹತೆ ಇರಬೇಕು.

**III ದೇಹದಾರ್ಢ್ಯತೆ**

**ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಕನಿಷ್ಠ ಎತ್ತರ 160 ಸೆಂ.ಮೀ ಇರಬೇಕು**

**IV. ವಯಸ್ಸು (ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆ ದಿನಾಂಕಕ್ಕೆ) ಕನಿಷ್ಠ 18 ವರ್ಷ ತುಂಬಿರಬೇಕು ಗರಿಷ್ಠ 26 ವರ್ಷ ಮೀರಿರಬಾರದು.**

### V. ಅರ್ಜಿ ಶುಲ್ಕ ಪಾವತಿಸುವ ವಿವರ:

ಬೆಮಸಾಸಂಸ್ಥೆಯ ವೆಬ್‌ಸೈಟ್ www.bmtccareers.com ನಲ್ಲಿ ದೊರೆಯುವ ನಿಗಧಿತ ಬ್ಯಾಂಕ್ ಚಲನ್ನು **ON-LINE ಮೂಲಕ ಮುದ್ರಿಸಿಕೊಂಡು** ರೂ.300/- ಅರ್ಜಿ ಶುಲ್ಕವನ್ನು ಯಾವುದಾದರೂ "ಸ್ಟೇಟ್ ಬ್ಯಾಂಕ್ ಆಫ್ ಮೈಸೂರು" (State Bank of Mysore) ಶಾಖೆಯಲ್ಲಿ ಮಾತ್ರ ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, (CAO-FA, BMTC) ಬೆಂಮಸಾಸಂಸ್ಥೆ, ಬೆಂಗಳೂರು ರವರ ಖಾತೆಗೆ ಪಾವತಿಸಬೇಕು. ಅರ್ಜಿ ಶುಲ್ಕದ ಮೊತ್ತ ಪಾವತಿ ಮಾಡಿದ ನಂತರ **ಬ್ಯಾಂ**ಕಿನಿಂದ ನೀಡುವ Sl.No/Journal No ನ್ನು ಅರ್ಜಿಯಲ್ಲಿ ತಪ್ಪದೇ ನಮೂದಿಸತಕ್ಕದ್ದು ಹಾಗೂ ಭರ್ತಿ ಮಾಡಿದ ಅರ್ಜಿಯೊಂದಿಗೆ ಲಗತ್ತಿಸಿ ಕಳುಹಿಸುವುದು.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ನಿಗಧಿತ ಅರ್ಜಿ ಶುಲ್ಕ ಪಾವತಿಸಬೇಕು. ಇಲ್ಲದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವಾ ಅದನ್ನು ಸಂಸ್ಥೆಯು ನಡೆಸುವ ಇತರೆ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

### VI. ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕ:

ಬೆಮಸಾಸಂಸ್ಥೆಯ ವೆಬ್‌ಸೈಟ್ www.bmtccareers.com ನಲ್ಲಿ ಪ್ರಕಟಿಸಲಾಗಿರುವ ಅರ್ಜಿ ನಮೂನೆಯನ್ನು ದಿನಾಂಕ **15/01/2013** ರಿಂದ **02/02/2013**ರ ವರೆಗಿನ ಅವಧಿಯಲ್ಲಿ ಮುದ್ರಿಸಿಕೊಂಡು, ಕ್ರಮವಾಗಿ ಭರ್ತಿಗೊಳಿಸಿ ಸಂಬಂಧಿಸಿದ ಎಲ್ಲಾ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳು ಮತ್ತು ಅರ್ಜಿ ಶುಲ್ಕದ ಬ್ಯಾಂಕ್ ಚಲನ್‌ಗಳೊಂದಿಗೆ, ಐದು ರೂಪಾಯಿಗಳ ಅಂಚೆ ಚೀಟಿ ಅಂಟಿಸಿದ ಸ್ವವಿಳಾಸ ಬರೆದಿರುವ 11 ಸೆಂ.ಮೀ x 23 ಸೆಂ.ಮೀ ಅಳತೆಯ ಒಂದು ಲಕೋಟೆಯನ್ನು ಭರ್ತಿ ಮಾಡಿದ ಅರ್ಜಿ ಕಳಹಿಸುವ ಲಕೋಟೆಯಲ್ಲಿಟ್ಟು ಅಂಟಿಸಿ, **"ಕಬಡ್ಡಿ ಕ್ರೀಡಾಖೋಟಾದಡಿ**

**ನಿರ್ವಾಹಕ ಹುದ್ದೆಗಾಗಿ ಅರ್ಜಿ''** ಎಂದು ನಮೂದಿಸಿದ ಅರ್ಜಿ ಲಕೋಟೆಯನ್ನು **<u>ಖುದ್ದಾಗಿ ಅಥವಾ ಅಂಚೆ ಮೂಲಕ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, 5ನೇ ಮಹಡಿ, ಶಾಂತಿನಗರ, ಬೆಂಗಳೂರು–560 027</u>** ರವರಿಗೆ ತಲುಪುವಂತೆ ಸಲ್ಲಿಸುವುದು. ನಿಗಧಿತ ಕೊನೆಯ ದಿನಾಂಕ **02/02/2013** ರ ಸಂಜೆ 5–30ರ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಭ್ಯರ್ಥಿಗಳು ಕೇವಲ ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣದಿಂದಲೂ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

## <u>VII.</u> ಕ್ರೀಡಾಖೋಟದಡಿ ವಿಶೇಷ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳು/ಮಿತಿಗಳು

1) ವಿಶೇಷ ನೇಮಕಾತಿ ಅಡಿಯಲ್ಲಿ ನೇಮಕಗೊಳ್ಳಲು ಅಭ್ಯರ್ಥಿಯು ಈ ಕೆಳಕಂಡ ಅರ್ಹತೆಯನ್ನು ಹೊಂದಿರಬೇಕು

   ಅ) ಅಭ್ಯರ್ಥಿಯು ರಾಜ್ಯ/ದೇಶವನ್ನು ರಾಷ್ಟ್ರೀಯ ಮಟ್ಟದಲ್ಲಿ ಅಥವಾ ಅಂತರಾಷ್ಟ್ರೀಯ ಮಟ್ಟದಲ್ಲಿ ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರತಿನಿಧಿಸಿರಬೇಕು/ಭಾಗವಹಿಸಿರಬೇಕು. ಅಂತರ್ ರಾಷ್ಟ್ರೀಯ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದರೆ ಸೆಕ್ರೆಟರಿ ಆಫ್ ನ್ಯಾಷನಲ್ ಕಬಡ್ಡಿ ಫೆಡರೇಷನ್ ಅವರು ಪ್ರಮಾಣ ಪತ್ರವನ್ನು(Certificate) ನೀಡಿರಬೇಕು. ರಾಷ್ಟ್ರೀಯ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದರೆ ಸೆಕ್ರೆಟರಿ ಆಫ್ ನ್ಯಾಷನಲ್ ಕಬಡ್ಡಿ ಫೆಡರೇಷನ್ ಅಥವಾ ಸೆಕ್ರೆಟರಿ ಆಫ್ ಸ್ಟೇಟ್ ಕಬಡ್ಡಿ ಅಸೋಷಿಯೇಷನ್ ಅವರು ಪ್ರಮಾಣ ಪತ್ರವನ್ನು(Certificate) ನೀಡಿರಬೇಕು.

   ಆ) ಅಭ್ಯರ್ಥಿಯು ಅಂತರ್ ವಿಶ್ವವಿದ್ಯಾಲಯ ಸ್ಪೋರ್ಟ್ಸ್ ಬೋರ್ಡ್‌ನಿಂದ ಏರ್ಪಡಿಸಿರುವ ಅಂತರ್ ವಿಶ್ವವಿದ್ಯಾಲಯ ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರತಿನಿಧಿಸಿರಬೇಕು/ ಭಾಗವಹಿಸಿರಬೇಕು. ಈ ಬಗ್ಗೆ ಡೀನ್ ಆಫ್ ಸ್ಪೋರ್ಟ್ಸ್ ಅಥವಾ ವಿಶ್ವವಿದ್ಯಾಲಯದ ಎಲ್ಲಾ ಕ್ರೀಡೆಗಳ ಉಸ್ತುವಾರಿ ಹೊಂದಿರುವ ಅಧಿಕಾರಿಯು ಪ್ರಮಾಣ ಪತ್ರವನ್ನು(Certificate) ನೀಡಿರಬೇಕು

   ಇ) ಅಭ್ಯರ್ಥಿಯು ಅಖಿಲ ಭಾರತ ಸ್ಕೂಲ್ ಗೇಮ್ಸ್ ಫೆಡರೇಷನ್‌ನಿಂದ ಏರ್ಪಡಿಸಿರುವ ರಾಷ್ಟ್ರೀಯ ಕಬಡ್ಡಿ ಶಾಲಾ ಪಂದ್ಯಾವಳಿಯಲ್ಲಿ ರಾಜ್ಯ/ಶಾಲಾ ತಂಡವನ್ನು ಪ್ರತಿನಿಧಿಸಿರಬೇಕು. ಈ ಬಗ್ಗೆ ಶಾಲೆಗಳ ಎಲ್ಲಾ ಕ್ರೀಡೆಗಳ ಉಸ್ತುವಾರಿ ಹೊಂದಿರುವ ರಾಜ್ಯದ ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು / ಹೆಚ್ಚುವರಿ ನಿರ್ದೇಶಕರು / ಜಂಟಿ ನಿರ್ದೇಶಕರು / ಉಪನಿರ್ದೇಶಕರು ಪ್ರಮಾಣ ಪತ್ರವನ್ನು(Certificate) ನೀಡಿರಬೇಕು.

*2) ಈ ವಿಶೇಷ ನೇಮಕಾತಿ ಅಡಿಯಲ್ಲಿ ನೇಮಕಗೊಳ್ಳಲು ಅರ್ಹ ಕ್ರೀಡಾಪಟುಗಳ ವಯೋಮಿತಿಯು ಕನಿಷ್ಠ 18 ವರ್ಷಗಳು ಪೂರ್ಣಗೊಂಡಿರಬೇಕು ಮತ್ತು ಗರಿಷ್ಠ 26 ವರ್ಷಗಳು ಮೀರಿರಬಾರದು.*

*3) ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ಎರಡನೇ ಭಾಷೆಯನ್ನಾಗಿ ಓದಿರಬೇಕು.*

*4) ಕ್ರೀಡಾಖೋಟಾದಡಿಯಲ್ಲಿ ಪುರುಷ ಕಬಡ್ಡಿ ಕ್ರೀಡಾ ಪಟುಗಳನ್ನು ಒಂದು ಬಾರಿ ವಿಶೇಷ ನೇಮಕಾತಿ ಅಡಿಯಲ್ಲಿ ನೇಮಕ ಮಾಡಿಕೊಳ್ಳುತ್ತಿರುವ ಪ್ರಯುಕ್ತ ಅಭ್ಯರ್ಥಿಗಳು ಯಾವುದೇ ವರ್ಗದಡಿ ಮೀಸಲಾತಿ ಕೋರಲು ಹಕ್ಕುಳ್ಳವರಾಗಿರುವುದಿಲ್ಲ.*

*5) ವಿಶೇಷ ನೇಮಕಾತಿ ಜಾಹೀರಾತಿನ ಮೂಲಕ ನಿರ್ವಾಹಕ ಹುದ್ದೆಗೆ ಆಯ್ಕೆಗೊಳ್ಳುವ ಅಭ್ಯರ್ಥಿಗಳನ್ನು ಎರಡು ವರ್ಷಗಳ ಕಾಲ "ಕೆಲಸದ ಮೇಲೆ ತರಬೇತಿದಾರ" ರನ್ನಾಗಿ ನೇಮಿಸಲಾಗುವುದು ಹಾಗೂ ತರಬೇತಿ ಅವಧಿಯಲ್ಲಿ ತರಬೇತಿ ಭತ್ಯೆಯನ್ನು ನೀಡಲಾಗುವುದು. ತರಬೇತಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದಲ್ಲಿ ಎರಡು ವರ್ಷಗಳ ಪರೀಕ್ಷಣಾರ್ಥಿ ಸೇವೆಯಲ್ಲಿ ನಿಯೋಜಿಸಿ ನಿರ್ವಾಹಕ ಹುದ್ದೆಯ ಕಾಲಿಕ ವೇತನ ಶ್ರೇಣಿಯಲ್ಲಿ ವೇತನ ಮತ್ತು ಭತ್ಯೆಗಳನ್ನು ನೀಡಲಾಗುವುದು.*

## VIII. ಆಯ್ಕೆ ವಿಧಾನ:

ಆಯ್ಕೆಯನ್ನು ನಿಬಂಧನೆ VII (1) ಅರ್ಹತೆಯುಳ್ಳ ಅಭ್ಯರ್ಥಿಗಳು ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದಿರುವ ಶೇಕಡವಾರು ಅಂಕಗಳ ಆಧಾರದ ಮೇಲೆ ಮಾಡಲಾಗುವುದು.

## IX. ತರಬೇತಿ ಭತ್ಯೆ:

ಆಯ್ಕೆಗೊಂಡ ಅಭ್ಯರ್ಥಿಗಳನ್ನು ಎರಡು ವರ್ಷಗಳ ಕಾಲ ಕೆಲಸದ ಮೇಲೆ ತರಬೇತಿಗೆ ನಿಯೋಜಿಸಲಾಗುವುದು. ತರಬೇತಿ ಅವಧಿಯಲ್ಲಿ ರೂ 6000/-ಗಳ ಮಾಸಿಕ ತರಬೇತಿ ಭತ್ಯೆಯನ್ನು ನೀಡಲಾಗುವುದು.

ಬೆಂಗಳೂರು ಕೇಂದ್ರ ಸ್ಥಾನದಲ್ಲಿ ಕಾರ್ಯ ನಿರ್ವಹಿಸುವುದರಿಂದ *ಮೇಲ್ಕಾಣಿಸಿದ ಮಾಸಿಕ ತರಬೇತಿ ಭತ್ಯೆಯ ಜೊತೆಗೆ ತಿಂಗಳಲ್ಲಿ ಕನಿಷ್ಠ 20 ದಿನಗಳು ವಾಸ್ತವಿಕ ಹಾಜರಾತಿ ಇದ್ದಲ್ಲಿ* ರೂ. 500/- ಗಳನ್ನು ಪರಿಶ್ರಮ ಭತ್ಯೆಯನ್ನಾಗಿ ನೀಡಲಾಗುವುದು.

## X. ವೇತನ ಶ್ರೇಣಿ: ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷಗಳ ಕೆಲಸದ ಮೇಲೆ ತರಬೇತಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿ ಖಾಯಂಪೂರ್ವ ಪರೀಕ್ಷಣಾರ್ಥಿ ಸೇವೆಯಲ್ಲಿ ನೇಮಕಗೊಂಡಲ್ಲಿ ರೂ.5850-70-5990-90-6350-130-7130-170-7980 ಕಾಲಿಕ ವೇತನ ಶ್ರೇಣಿಯನ್ನು ನಿಗಧಿಪಡಿಸಲಾಗುವುದು.

## XI. ವಿಶೇಷ ಸೂಚನೆಗಳು:

ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವಂತೆ ಈ ಕೆಳಕಂಡ ಮೂಲ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಲಾಗಿರುವ ಕೊನೆಯ ದಿನಾಂಕದೊಳಗೆ ಹೊಂದಿರಬೇಕು ಹಾಗೂ ಸಂಸ್ಥೆಯು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು.

1) ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡಿರುವ ಅಂಕಪಟ್ಟಿ
2) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ / ವರ್ಗಾವಣಾ ಪ್ರಮಾಣ ಪತ್ರ / ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ.
3) ಚಾಲ್ತಿಯಲ್ಲಿರುವ ನಿರ್ವಾಹಕರ ಲೈಸೆನ್ಸ್ ಮತ್ತು ಬ್ಯಾಡ್ಜ್
4) ಕಂಡಿಕೆ VII(1)ರಲ್ಲಿ ಸೂಚಿಸಿರುವ ಪ್ರಕಾರ ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರತಿನಿಧಿಸಿರುವ/ಭಾಗವಹಿಸಿರುವ ಬಗ್ಗೆ ಸಂಬಂಧಿಸಿದ ಕ್ರೀಡಾ ಪ್ರಾಧಿಕಾರದಿಂದ ನೀಡಲಾಗಿರುವ ಪ್ರಮಾಣ ಪತ್ರಗಳು

## XII. ಇತರೆ ಸೂಚನೆಗಳು:

1) ಸಂಸ್ಥೆಯ ಜಾಹೀರಾತು ಸಂಖ್ಯೆ 1/2012 ದಿನಾಂಕ 27/6/2012ನ್ನು ಆಡಳಿತಾತ್ಮಕ ಕಾರಣಗಳಿಂದ ರದ್ದು ಪಡಿಸಲಾಗಿದೆ. ಆ ಜಾಹೀರಾತಿನಂತೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳು ಪುನ: ಅರ್ಜಿ ಸಲ್ಲಿಸುವುದು ಮತ್ತು ಅರ್ಜಿ ಸಲ್ಲಿಸಿದ್ದ ಬಗ್ಗೆ ಮಾಹಿತಿ ನೀಡಿದಲ್ಲಿ ಅವರಿಗೆ ಅರ್ಜಿ ಶುಲ್ಕದ ವಿನಾಯಿತಿ ನೀಡಲಾಗುವುದು.
2) ನಿಬಂಧನೆ VII(1)ರಲ್ಲಿ ಸೂಚಿಸಿರುವ ಪ್ರಕಾರ ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರತಿನಿಧಿಸಿರುವ/ ಭಾಗವಹಿಸಿರುವ ಪುರುಷ ಕಬಡ್ಡಿ ಕ್ರೀಡಾಪಟುಗಳು ಮಾತ್ರ ಅರ್ಜಿ ಸಲ್ಲಿಸಬೇಕು. ಇತರೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದರೆ ಅವರ ಅರ್ಜಿಯನ್ನು ತಿರಸ್ಕರಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಗಳು ಸಲ್ಲಿಸಿರುವ ಅರ್ಜಿ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ.
3) ನೈತಿಕ ದುರ್ನಡತೆಯಿಂದಾಗಿ / ನೀತಿಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ಈ ಸಂಸ್ಥೆಯಲ್ಲಿ ಅಥವಾ ರಾಜ್ಯ / ಕೇಂದ್ರ / ಸ್ಥಳೀಯ ಸಂಸ್ಥೆ / ಕೈಗಾರಿಕಾ / ವಾಣಿಜ್ಯಕ್ಕೆ ಸಂಬಂಧಪಟ್ಟ ಅಥವಾ ರಾಜ್ಯ ಸಾರಿಗೆ ಅಧೀನದಲ್ಲಿರುವ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ / ನೀತಿ ಬಾಹಿರ ಚಟುವಟಿಕೆಗಳಲ್ಲಿ ಒಳಗಾಗಿ ಅಥವಾ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ / ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ / ವಜಾ ಮಾಡಲ್ಪಟ್ಟಿದ್ದು ಕಂಡು ಬಂದಲ್ಲಿ ನೇಮಕಾತಿಗೆ ಅನರ್ಹರಾಗುತ್ತಾರೆ.

4) ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು ಎಲ್ಲಾ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿಕೊಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.
5) ಅಭ್ಯರ್ಥಿಯು ಅರ್ಜಿಯನ್ನು ಸಮರ್ಪಕವಾಗಿ ತುಂಬದೇ ಅರ್ಜಿಯು ತಿರಸ್ಕೃತವಾದಲ್ಲಿ ಅಥವಾ ಯಾವುದೇ ಸೌಲಭ್ಯದಿಂದ ಅವರು ವಂಚಿತರಾದಲ್ಲಿ ಅದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರು.
6) ಆಯ್ಕೆಗೊಂಡು ಸೇವೆಯಲ್ಲಿ ಖಾಯಂಗೊಳ್ಳುವ ಅಭ್ಯರ್ಥಿಗಳು ಉಪಧಾನ ಪಾವತಿ ಕಾಯ್ದೆ 1972 ರನ್ವಯ ಉಪಧಾನ ಪಡೆಯಲು ಅರ್ಹರು.
7) ಸುಳ್ಳು ಮಾಹಿತಿ ಅಥವಾ ನಕಲಿ ಪ್ರಮಾಣ ಪತ್ರ : ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು ಯಾವುದೇ ಸಂದರ್ಭದಲ್ಲಿ ಕಂಡುಬಂದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೇ ನೌಕರಿಯಿಂದ ವಜಾ ಮಾಡುವುದರ ಜೊತೆಗೆ ಅವರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.
8) ಅಭ್ಯರ್ಥಿಯು ಈ ಜಾಹೀರಾತಿನ ಸಂಬಂಧ ಯಾವುದೇ ವಿಧವಾದ ಪ್ರಚಾರ ಮಾಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಅವರನ್ನು ಯಾವ ಮುನ್ಸೂಚನೆ ನೀಡದೇ ಅನರ್ಹಗೊಳಿಸಲಾಗುವುದು.

**ವ್ಯವಸ್ಥಾಪಕ ನಿರ್ದೇಶಕರು.**

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:: ಕೇಂದ್ರ ಕಛೇರಿ :: ಬೆಂಗಳೂರು-27**

**ಅರ್ಜಿ ನಮೂನೆ**

**ಜಾಹೀರಾತು ಸಂಖ್ಯೆ 1/2013 ರನ್ವಯ ಪುರುಷ ಕಬಡ್ಡಿ ಕ್ರೀಡಾಕೋಟಾದಡಿಯಲ್ಲಿ ನಿರ್ವಾಹಕ ಹುದ್ದೆಗಾಗಿ ಅರ್ಜಿ**

| ಇತ್ತೀಚಿನ ಭಾವಚಿತ್ರ ಅಂಟಿಸಿ ಸಹಿ ಮಾಡಿ |
|---|

1) ಅಭ್ಯರ್ಥಿಯ ಹೆಸರು: ________________________.

2) ತಂದೆಯ ಹೆಸರು : ________________________

3) ವಿಳಾಸ : ________________________________________
________________________________________
________________________________________
______________ ಪಿನ್ ಕೋಡ್__________

4) ಹುಟ್ಟಿದ ದಿನಾಂಕ : ______________________(ಶಾಲಾ ದಾಖಲಾತಿಯಲ್ಲಿದ್ದಂತೆ)

5) ಜನ್ಮ ಸ್ಥಳ ಜಿಲ್ಲೆ : ________________________

6) ಪಿ.ಯು.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆ ವಿವರ:

| ವಿದ್ಯಾರ್ಹತೆ | ನಿಗಧಿತ ಒಟ್ಟು ಅಂಕಗಳು | ಪಡೆದಿರುವ ಒಟ್ಟು ಅಂಕಗಳು | ಶೇಕಡವಾರು |
|---|---|---|---|
| | | | |

7) ಜಾಹೀರಾತು ಕಲಂ VII(1) ರಂತೆ ಕಬಡ್ಡಿ ಕ್ರೀಡೆಯಲ್ಲಿ ಪಡೆದಿರುವ ಪದಕಗಳು/ಭಾಗವಹಿಸಿರುವ ವಿವರ:

ಅ)

ಆ)

ಇ)

8) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಭ್ಯಸಿಸಿರುವ ಬಗ್ಗೆ ವಿವರ:_____________

9) ನಿರ್ವಾಹಕರ ಲೈಸೆನ್ಸ್ ಸಂಖ್ಯೆ: __________ ಪಡೆದ ದಿನಾಂಕ:____/____/____

10) ನಿವಾಹಕರ ಲೈಸೆನ್ಸ್ ಚಾಲ್ತಿಯಲ್ಲಿರುವ ಕೊನೆಯ ದಿನಾಂಕ: ___/____/____

11) ನಿರ್ವಾಹಕರ ಬ್ಯಾಡ್ಜ್ ಸಂಖ್ಯೆ : __________

11) ದೇಹದಾರ್ಢ್ಯತೆ: ಎತ್ತರ ____ ಸೆಂ.ಮೀ.

12) ಅರ್ಜಿ ಶುಲ್ಕದ ವಿವರ: **Sl.No/Journal No**:_____________ದಿನಾಂಕ ___/___/____

ಮೊತ್ತ: ರೂ. ________ ಬ್ಯಾಂಕ್ ಶಾಖೆ: ________________

13) ಅಡಕಗಳು:

" ಘೋಷಣಾ ಪತ್ರ "

ನಾನು ಈ ಮೂಲಕ ಘೋಷಿಸುವುದೇನೆಂದರೆ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ವಿವರಗಳು ಸತ್ಯವಾಗಿದ್ದು ಪರಿಪೂರ್ಣವಾಗಿವೆ. ನಾನು ಕಾನೂನು ಬಾಹಿರ/ ಕ್ರಿಮಿನಲ್ ಮೊಕದ್ದಮೆಗಳನ್ವಯ ವಿಚಾರಣೆ/ಶಿಕ್ಷೆಗೆ ಒಳಪಟ್ಟಿಲ್ಲವೆಂದು ದೃಢೀಕರಿಸುತ್ತೇನೆ ಹಾಗೂ ನಾನು ಈ ಹಿಂದೆ ಸರ್ಕಾರದ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಯ ಸೇವೆಯಿಂದ ವಜಾಗೊಂಡಿಲ್ಲವೆಂದು ಘೋಷಿಸುತ್ತೇನೆ. ಸಲ್ಲಿಸಿರುವ ವಿವರಗಳು ಸುಳ್ಳಾಗಿ ಕಂಡು ಬಂದ ಪಕ್ಷದಲ್ಲಿ ನನ್ನನ್ನು ಯಾವಾಗಲಾದರೂ ಸೇವೆಯಿಂದ ಯಾವ ಮುನ್ಸೂಚನೆ ಇಲ್ಲದೆ ವಜಾ ಮಾಡುವುದರೊಂದಿಗೆ ಕ್ರಿಮಿನಲ್ ಕ್ರಮ ಕೈಗೊಳ್ಳಲು ಸಂಸ್ಥೆಗೆ ಅಧಿಕಾರವಿದೆಯೆಂದು ತಿಳಿದಿದ್ದೇನೆ.

ದಿನಾಂಕ: ಅಭ್ಯರ್ಥಿಯ ಸಹಿ

## BMTC, BANGALORE

| | |
|---|---|
| BANK COPY | FEE CHALLAN |
| Bank Name | State Bank of Mysore |
| Journal No | |
| Journal Date | |
| Post Applied | Conductor(Sports quota) |
| Name | |

Paid into the credit of CAO-FA, BMTC
A/c No. 64027443731

STATE BANK OF MYSORE, Jayanagar, Bangalore.

| Particulars | Amount in ₹ |
|---|---|
| Application Fee | 300.00 |
| Bank Charges | 30.00 |
| Total | 330.00 |

Rupees three hundred and thirty only

Signature of Remitter/ Applicant
Received the above amount in (in words)

| Date and Seal | Signature of Receiving authority |
|---|---|

**LAST DATE FOR REMITTENCE OF FEE-02/02/2013**

## BMTC, BANGALORE

| | |
|---|---|
| BANK COPY | FEE CHALLAN |
| Bank Name | State Bank of Mysore |
| Journal No | |
| Journal Date | |
| Post Applied | Conductor(Sports quota) |
| Name | |

Paid into the credit of CAO-FA, BMTC
A/c No. 64027443731

STATE BANK OF MYSORE, Jayanagar, Bangalore.

| Particulars | Amount in ₹ |
|---|---|
| Application Fee | 300.00 |
| Bank Charges | 30.00 |
| Total | 330.00 |

Rupees three hundred and thirty only

Signature of Remitter/ Applicant
Received the above amount in (in words)

| Date and Seal | Signature of Receiving authority |
|---|---|

**LAST DATE FOR REMITTENCE OF FEE-02/02/2013**

## BMTC, BANGALORE

| | |
|---|---|
| CANDIDATE COPY | FEE CHALLAN |
| Bank Name | State Bank of Mysore |
| Journal No | |
| Journal Date | |
| Post Applied | Conductor(Sports quota) |
| Name | |

Paid into the credit of CAO-FA, BMTC
A/c No. 64027443731

STATE BANK OF MYSORE, Jayanagar, Bangalore.

| Particulars | Amount in ₹ |
|---|---|
| Application Fee | 300.00 |
| Bank Charges | 30.00 |
| Total | 330.00 |

Rupees three hundred and thirty only

Signature of Remitter/ Applicant
Received the above amount in (in words)

| Date and Seal | Signature of Receiving authority |
|---|---|

**LAST DATE FOR REMITTENCE OF FEE-02/02/2013**

## BMTC, BANGALORE

| | |
|---|---|
| BMTC COPY | FEE CHALLAN |
| Bank Name | State Bank of Mysore |
| Journal No | |
| Journal Date | |
| Post Applied | Conductor(Sports quota) |
| Name | |

Paid into the credit of CAO-FA, BMTC
A/c No. 64027443731

STATE BANK OF MYSORE, Jayanagar, Bangalore.

| Particulars | Amount in ₹ |
|---|---|
| Application Fee | 300.00 |
| Bank Charges | 30.00 |
| Total | 330.00 |

Rupees three hundred and thirty only

Signature of Remitter/ Applicant
Received the above amount in (in words

| Date and Seal | Signature of Receiving authority |
|---|---|

**LAST DATE FOR REMITTENCE OF FEE-02/02/2013**